RNU AIR DHARWAD

**SEPTEMBER 24,2024**
**ALL INDIA RADIO- DHARWAD**
**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ವಿವೇಕಾದಿತ್ಯ ಕನಿಯಾಲ**

<><><>

**ಮುಖ್ಯಾಂಶಗಳು:**

- **ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ** ಮೇಲ್ವಿಚಾರಣೆಗಾಗಿ, ಜಿಲ್ಲಾಧಿಕಾರಿ ನೇತೃತ್ವದ ಸಮಿತಿ ರಚನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ** ಕಾಮಗಾರಿಗಳ ಅನುಷ್ಠಾನಕ್ಕೆ, ಸಚಿವ ಸಂಪುಟದ ತಾತ್ವಿಕ ಒಪ್ಪಿಗೆ.
- **ಮಂಡ್ಯದ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ,** 30 ಕೋಟಿ ರೂಪಾಯಿ ಅನುದಾನ – ಸಚಿವ ಮಂಕಾಳ ವೈದ್ಯ.
- **ಪೌರ ಕಾರ್ಮಿಕ ದಿನಾಚರಣೆ;** 'ಪೌರ ಕಾರ್ಮಿಕರು ಸ್ವಚ್ಛತಾ ಸೇನಾನಿಗಳು' ಎಂದು, ಎಲ್ಲೆಡೆ ಶ್ಲಾಘನೆ.

<><><>

**ಈಗ ವಾರ್ತೆಗಳ ವಿವರ**

<><><>

**ಹಾವೇರಿ ಜಿಲ್ಲೆ, ಬ್ಯಾಡಗಿ ತಾಲೂಕು,** ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ, ಜಿಲ್ಲಾಧಿಕಾರಿ ನೇತೃತ್ವದ ಸಮಿತಿ ರಚಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಸಭೆಯ, ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ಕಾಗಿನೆಲೆ ಗ್ರಾಮದಲ್ಲಿ ಕನಕ ಗದ್ದುಗೆ ಸಮೀಪ ಇರುವ, ಕನಕ ಸರೋವರ ಅಭಿವೃದ್ಧಿಪಡಿಸಿ, ಪ್ರವಾಸಿಗರ ಮನೋರಂಜನೆಗೆ ದೋಣಿ ವಿಹಾರ ಆರಂಭಿಸಲು ಸಭೆ ಅನುಮೋದಿಸಿತು.

ಕಾಗಿನೆಲೆ ಕನಕ ಪರಿಸರ ಸ್ನೇಹಿ ಪಾರ್ಕ್ ಸಮೀಪ, ಐದು ಎಕರೆ ಪ್ರದೇಶದಲ್ಲಿ ಔಷಧಿ ಸಸ್ಯಗಳನ್ನು ಬೆಳೆಸಲು ನಿರ್ಧರಿಸಲಾಗಿದೆ. ಕನಕದಾಸರ ಜೀವನ ವೃತ್ತಾಂತ ಸಾರುವ, ಒಳಾಂಗಣ ವಸ್ತು ಸಂಗ್ರಹಾಲಯ ನಿರ್ಮಾಣದ ಕುರಿತು ಹೊಸ ಪ್ರಸ್ತಾವ ಸಿದ್ಧ ಪಡಿಸುವಂತೆ, ಮುಖ್ಯಮಂತ್ರಿ ನಿರ್ದೇಶಿಸಿದರು.

<><><>

**ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ,** ಸಂಗೊಳ್ಳಿ ಗ್ರಾಮದಲ್ಲಿ, ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ ಕಾಮಗಾರಿಗಳ ಅನುಷ್ಠಾನಕ್ಕೆ, 179 ಕೋಟಿ 30 ಲಕ್ಷ ರೂಪಾಯಿ ಮೊತ್ತದ ಕಾಮಗಾರಿಗೆ, ಸಚಿವ ಸಂಪುಟ ಅನುಮೋದಿಸಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ನಾಲ್ಕನೇ ಸಭೆ ನಡೆಯಿತು.

ರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು, ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯಲ್ಲಿ, ಒಂದನೇ ತರಗತಿಯಿಂದ ಐದನೇ ತರಗತಿ ವರೆಗೆ ವರ್ಟಿಕಲ್ ಕ್ಲಾಸ್ ಪ್ರಾರಂಭಿಸುವ ಕುರಿತು, ಪರಿಶೀಲಿಸುವಂತೆ, ಮುಖ್ಯಮಂತ್ರಿ ಸೂಚಿಸಿದರು.

ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕಿನ ನಂದಗಡ ಗ್ರಾಮದಲ್ಲಿ, 75 ಕೋಟಿ 29 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ, ಸಂಗೊಳ್ಳಿ ರಾಯಣ್ಣ ವಸ್ತು ಸಂಗ್ರಹಾಲಯದ ಕಾಮಗಾರಿ ಅಂತಿಮ ಹಂತ ತಲುಪಿದ್ದು, ನವೆಂಬರ್ ಎರಡನೇ ವಾರದ ಒಳಗಾಗಿ, ನಂದಗಡ ಕೆರೆ ಅಭಿವೃದ್ಧಿ ಹಾಗೂ ಸಂಗೊಳ್ಳಿ ರಾಯಣ್ಣ ಪ್ರತಿಮೆ ಸ್ಥಾಪನೆಯ ಕಾಮಗಾರಿಗಳನ್ನೂ ಪೂರ್ಣಗೊಳಿಸುವಂತೆ, ಮುಖ್ಯಮಂತ್ರಿ ನಿರ್ದೇಶಿಸಿದರು.

<><><>

**ಬುಡಕಟ್ಟು ಜನ ವಸತಿಯ ಗ್ರಾಮಗಳ ಸುಧಾರಣೆಗೆ,** ಪ್ರಧಾನಮಂತ್ರಿ ಜನಜಾತಿ ಉನ್ನತ ಗ್ರಾಮ ಅಭಿಯಾನಕ್ಕೆ, ಗಾಂಧಿ ಜಯಂತಿಯಂದು, ಚಾಲನೆ ದೊರೆಯಲಿದೆ ಎಂದು, ಬಾಗಲಕೋಟೆ ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಈ ವಿಶೇಷ ಅಭಿಯಾನಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಬುಡಕಟ್ಟು ಸಮುದಾಯಗಳ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಸುಧಾರಿಸಲು, 79 ಕೋಟಿ 156 ಲಕ್ಷ ರೂಪಾಯಿ ವೆಚ್ಚವನ್ನು ಅಂದಾಜಿಸಲಾಗಿದೆ ಎಂದರು.

ಬಾಗಲಕೋಟೆ ಜಿಲ್ಲೆಯಲ್ಲಿ, 5 ಬ್ಲಾಕ್ ಗಳಿದ್ದು, ಹಲಗಲಿ, ಪರ್ವತಿ, ಹಾನಪುರ ಎಸ್.ಪಿ, ನರಸಾಪೂರ, ಆಡಗಲ್, ಹೂವಿನಹಳ್ಳಿ, ಮುರಡಿ ಗ್ರಾಮಗಳಿಗೆ, ಪ್ರಧಾನಮಂತ್ರಿ ಉನ್ನತ ಗ್ರಾಮ ಯೋಜನೆ ಅಡಿ, ಮುಂದಿನ ಐದು ವ ´ಗಳಲ್ಲಿ ಅಭಿವೃದ್ಧಿ ಸಾಧಿಸಲು ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದರು.

<><><>

**ಧಾರವಾಡ ಕೃಷಿ ವಿಶ್ವವಿದ್ಯಾಲಯ,** 'ಹವಾಮಾನ ವೈಪರಿತ್ಯ ನಿರ್ವಹಣೆಗೆ ಕೃಷಿ ತಾಂತ್ರಿಕತೆಗಳು' ಧ್ಯೇಯದೊಂದಿಗೆ, ಆಯೋಜಿಸಿರುವ ಕೃಷಿ ಮೇಳದಲ್ಲಿ, ಮೂರನೇ ದಿನ, 'ಸಿರಿ ಧಾನ್ಯಗಳ ಮಳಿಗೆ' ಗಮನ ಸೆಳೆಯಿತು.

ಸಿರಿ ಧಾನ್ಯಗಳ ಮಹತ್ವ ತಿಳಿಸುವ, ಸೆಲ್ಫಿ ಬೂತ್ ಮೂಲಕ, ಪಂಚಧಾನ್ಯಗಳಾದ ಕೊರಲೆ, ಸಾಮೆ, ಊದಲು, ಹಾರಕ ಮತ್ತು ನವಣೆಯ ಮಹತ್ವವನ್ನು, ಜನರಿಗೆ ತಿಳಿಸಲಾಯಿತು ಎಂದು, ಧಾರವಾಡ ರಾಯಪುರದ, ಶ್ರೀ ಧರ್ಮಸ್ಥಳ ಸಿರಿಮಿಲೆಟ್ಸ್, ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗದ, ಆಹಾರ ತಜ್ಞೆ ಅರುಣಾ ತಿಮ್ಮಾಪುರ ತಿಳಿಸಿದರು.

<><><>

**ಆಹಾರ ತಜ್ಞೆ ಅರುಣಾ ತಿಮ್ಮಾಪುರ ಧ್ವನಿ 47 ಸೆಕೆಂದುಗಳು**

<><><>

**ಕೃಷಿ ಮೇಳದ ಅಂಗವಾಗಿ ನೀಡಲಾಗುವ, ಡಾಕ್ಟರ್ ಚನ್ನವೀರ ಕಣವಿ** ಉತ್ತಮ ಕನ್ನಡ ಕೃಷಿ ಲೇಖನ– 'ಪೈರಿಗೆ ನೀರು ಬೇಕೆಂಬಲ್ಲಿ' ಆಯ್ಕೆಯಾಗಿದೆ. ಸಹಾಯಕ ಕೃಷಿ ನಿರ್ದೇಶಕ, ಲೇಖಕ ಚನ್ನಪ್ಪ ಅಂಗಡಿ ಅವರಿಗೆ ಹತ್ತು ಸಾವಿರ ರೂಪಾಯಿ ನಗದು ಪುರಸ್ಕಾರ ಸಂದಿದೆ. ಈ ಲೇಖನ ಹೊಸತು ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಮಂಡ್ಯದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ,** 30 ಕೋಟಿ ರೂಪಾಯಿ ಅನುದಾನ ಸರ್ಕಾರ ಬಿಡುಗಡೆ ಮಾಡಲಿದೆ ಎಂದು, ಸಚಿವ ಮಂಕಾಳ ವೈದ್ಯ ತಿಳಿಸಿದ್ದಾರೆ.

ಡಿಸೆಂಬರ್ 20 ರಿಂದ 22 ನೇ ತಾರೀಖಿನ ವರೆಗೆ, ಮಂಡ್ಯ ಜಿಲ್ಲೆಯಲ್ಲಿ ಆಯೋಜಿತ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ, ಕನ್ನಡ ಜ್ಯೋತಿ ರಥಯಾತ್ರೆಗೆ, ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಭುವನಗಿರಿಯಲ್ಲಿರುವ ರಾಜ್ಯದ ಏಕೈಕ ಕನ್ನಡಾಂಬೆ ಭುವನೇಶ್ವರಿ ದೇವಿಯ ದೇವಸ್ಥಾನದಲ್ಲಿ, ಚಾಲನೆ ನೀಡಿ ಮಾತನಾಡಿದರು.

ಕದಂಬರ ಆರಾಧ್ಯ ದೈವ ಭುವನೇಶ್ವರಿಯ ಪುಣ್ಯ ಕ್ಷೇತ್ರವಾದ ಜಿಲ್ಲೆಯಿಂದ ಪ್ರಾರಂಭವಾಗುವ ಕನ್ನಡ ಜ್ಯೋತಿ ರಥಯಾತ್ರೆ, ರಾಜ್ಯದ 31 ಜಿಲ್ಲೆಗಳು ಸೇರಿದಂತೆ, 6 ಬೇರೆ ಬೇರೆ ರಾಜ್ಯಗಳ ಗಡಿ ಪ್ರದೇಶದಲ್ಲಿ ಸಂಚರಿಸಿ, ಮಂಡ್ಯ ಜಿಲ್ಲೆ ತಲುಪಲಿದೆ ಎಂದರು.

**ಕನ್ನಡ ಸಾಹಿತ್ಯ ಪರಿ ’ತ್ತಿನ ರಾಜ್ಯಾಧ್ಯಕ್ಷ** ಮಹೇಶ ಜೋಶಿ ಮಾತನಾಡಿ, ಐತಿಹಾಸಿಕ ಸ್ಥಳವಾಗಿರುವ ಭುವನಗಿರಿಯ ಭುವನೇಶ್ವರಿ ದೇವಿ ದೇವಾಲಯದಲ್ಲಿ ಎರಡನೇ ಬಾರಿಗೆ, ಕನ್ನಡ ಜ್ಯೋತಿ ರಥಕ್ಕೆ ಚಾಲನೆ ನೀಡಲಾಗಿದೆ ಎಂದರು.

**ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ ಮಾತನಾಡಿ,** ಕನ್ನಡ ಜ್ಯೋತಿ ರಥಯಾತ್ರೆ ಹೊನ್ನಾವರ, ಕುಮಟಾ, ಅಂಕೋಲಾ, ಕಾರವಾರ, ಗೋವಾದ ಕಾಣಕೋಣ, ಜೋಯಿಡಾ, ದಾಂಡೇಲಿ, ಹಳಿಯಾಳ, ಯಲ್ಲಾಪುರ, ಶಿರಸಿ ಮೂಲಕ ಹಾವೇರಿ ಜಿಲ್ಲೆ ಪ್ರವೇಶಿಸಲಿದೆ ಎಂದರು.

<><><>

**ಪೌರ ಕಾರ್ಮಿಕರ ದಿನದ ಹಿನ್ನೆಲೆ,** ಸ್ವಚ್ಛ ಹಾಗೂ ಸ್ವಸ್ಥ ನಗರವನ್ನಾಗಿ ಕಾಪಾಡುವಲ್ಲಿ, ನಾಡಿನ ಎಲ್ಲ ಪೌರ ಕಾರ್ಮಿಕರ ಶ್ರಮ ಶ್ಲಾಘನೀಯ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ, ಪೌರ ಕಾರ್ಮಿಕ ದಿನದ ಶುಭಾಶಯ ಸಂದೇಶ ನೀಡಿರುವ ಮುಖ್ಯಮಂತ್ರಿಯವರು, ಪೌರ ಕಾರ್ಮಿಕರನ್ನು ಸ್ವಚ್ಛತಾ ಸೈನಿಕರೆಂದು ಭಾವಿಸಿರುವುದಾಗಿ, ತಿಳಿಸಿದ್ದಾರೆ.

**ಪೌರ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ,** ಐ.ಪಿ.ಡಿ. ಸಾಲಪ್ಪನವರು ಸರ್ಕಾರಕ್ಕೆ ವರದಿ ಸಲ್ಲಿಸಿದ ದಿನವನ್ನು, ಪೌರ ಕಾರ್ಮಿಕರ ದಿನಾಚರಣೆಯನ್ನಾಗಿ ರಾಜ್ಯಾದ್ಯಂತ ಆಚರಿಸಲಾಗುತ್ತದೆ. ಪೌರ ಕಾರ್ಮಿಕರನ್ನು ಗೌರವಿಸಿ, ಸತ್ಕರಿಸಲಾಗುತ್ತದೆ.

**ಬಳ್ಳಾರಿಯಲ್ಲಿ ಆಯೋಜಿಸಿದ್ದ, ಪೌರ ಕಾರ್ಮಿಕರ** ದಿನಾಚರಣೆಯಲ್ಲಿ, ನಗರದ ಪೌರ ಕಾರ್ಮಿಕರಿಗೆ ಹೂ ಗುಚ್ಛ ನೀಡಿ, ಮೇಯರ್ ಮುಲ್ಲಂಗಿ ನಂದೀಶ್ ಗೌರವಿಸಿದರು. ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದ, 122 ಜನ ಪೌರ ಕಾರ್ಮಿಕರನ್ನು, ಈ ವ ’ೕ ಖಾಯಂಗೊಳಿಸುವ ಭರವಸೆ ನೀಡಿದರು. ಪೌರ ಕಾರ್ಮಿಕರ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಅವರು ಟ್ರೋಫಿಗಳನ್ನು ಪ್ರದಾನ ಮಾಡಿದರು.

<><><>

**ಚಿಕ್ಕಬಳ್ಳಾಪುರ ನಗರಸಭೆಯ ಪೌರ ಕಾರ್ಮಿಕರನ್ನು,** ಕೇಂದ್ರ ಪುರಸ್ಕೃತ ಅಪಘಾತ ವಿಮಾ ಯೋಜನೆಗಳಾದ, ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆ ಮತ್ತು ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆಗಳ ವ್ಯಾಪ್ತಿಗೆ ತರಲಾಗುವುದು ಎಂದು, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದ್ದಾರೆ.

<><><>

**ಪೌರ ಕಾರ್ಮಿಕರ ನೇಮಕಾತಿಗೆ** ನಿಗದಿಪಡಿಸಿರುವ ಮೀಸಲಾತಿ ಹಾಗೂ ರೋಸ್ಟರ್ ನಿಯಮ ಸಡಿಲಿಸುವಂತೆ, ಸರ್ಕಾರಕ್ಕೆ ಮನವಿ ಮಾಡುವುದಾಗಿ, ಆದಿ ಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್.ಮಂಜುನಾಥ ತಿಳಿಸಿದ್ದಾರೆ.

ಚಿತ್ರದುರ್ಗ ನಗರಸಭೆ, ಅಂಬೇಡ್ಕರ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ, ಪೌರ ಕಾರ್ಮಿಕ ದಿನಾಚರಣೆಯಲ್ಲಿ ಅವರು, ಮಾತನಾಡಿದರು.

<><><>

**ಪೌರ ಕಾರ್ಮಿಕರ ದಿನಾಚರಣೆ ಅಂಗವಾಗಿ,** ಧಾರವಾಡ ಜಿಲ್ಲೆ, ಹುಬ್ಬಳ್ಳಿಯ 47ನೇ ವಾರ್ಡಿನಲ್ಲಿ, 26 ಜನ ಪೌರ ಕಾರ್ಮಿಕರನ್ನು ಸತ್ಕರಿಸಿ, ನಾಗರಿಕರು ಗೌರವಿಸಿ, ಮಾದರಿಯಾಗಿದ್ದಾರೆ.

ಶಾಸಕ ಮಹೇಶ ಟೆಂಗಿನಕಾಯಿ, ಹಿರಿಯ ಸಾಮಾಜಿಕ ಕಾರ್ಯಕರ್ತ ಲಿಂಗರಾಜ ಪಾಟೀಲ ಅವರು, ವಾರ್ಡಿನ ನಿವಾಸಿಗಳ ಪರವಾಗಿ, ಕೃತಜ್ಞತಾ ಸೂಚಕವಾಗಿ, ಕಾಣಿಕೆ ನೀಡಿ, ಪೌರ ಕಾರ್ಮಿಕರನ್ನು ಗೌರವಿಸಿದರು. ಅವರ ಕಾರ್ಯವನ್ನು ಶ್ಲಾಘಿಸಿದರು.

ಪ್ರದೇಶ ಸಮಾಚಾರಕ್ಕಾಗಿ, ಅನಿಸಿಕೆ ಹಂಚಿಕೊಂಡಿದ್ದಾರೆ ಹಿರಿಯ ಸಾಮಾಜಿಕ ಕಾರ್ಯಕರ್ತ ಲಿಂಗರಾಜ ಪಾಟೀಲ.

<><><>

**ಧ್ವನಿ – ಲಿಂಗರಾಜ್ ಪಾಟೀಲ್ – 43 ಸೆಕೆಂದುಗಳು**

<><><>

**ಹುಬ್ಬಳ್ಳಿಯ ರಾಮಕೃಷ್ಣ ವಿವೇಕಾನಂದ** ಆಶ್ರಮದ ಅಧ್ಯಕ್ಷರಾಗಿದ್ದ, ಸ್ವಾಮಿ ರಘುವೀರಾನಂದರು ನಿನ್ನೆ ನಿಧನರಾದರು. ಕೀರ್ತಿಶೇಷ ಪುರುಷೋತ್ತಮಾನಂದ ಸ್ವಾಮೀಜಿ ಶಿಷ್ಯರಾಗಿದ್ದ ಅವರಿಗೆ, 60 ವರ್ಷ ವಯಸ್ಸಾಗಿತ್ತು.

ಹುಬ್ಬಳ್ಳಿಯ ಕಲ್ಯಾಣನಗರದ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ, ಇಂದು ಬೆಳಗ್ಗೆ 10.30ರ ವರೆಗೆ, ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಬಳಿಕ 11 ಗಂಟೆಗೆ, ಕೇಶ್ವಾಪುರದ ಮುಕ್ತಿಧಾಮದಲ್ಲಿ, ಅಂತ್ಯಕ್ರಿಯೆ ನೆರವೇರಲಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ, ಅನೇಕ ಗಣ್ಯರು ಪೂಜ್ಯರ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ.

<><><>

**ಯಾದಗಿರಿ ತಾಲೂಕಿನ ಜಿನಕೇರಾ ತಾಂಡಾದಲ್ಲಿ** ಸಿಡಿಲು ಬಡಿದು, ಒಂದೇ ಕುಟುಂಬದ ಮೂವರು ಸೇರಿದಂತೆ, ನಾಲ್ವರು ಮೃತಪಟ್ಟಿದ್ದಾರೆ.

**ಮತ್ತೊಂದು ಘಟನೆಯಲ್ಲಿ,** ಯಾದಗಿರಿ ತಾಲೂಕಿನ ಆರ್.ಹೊಸಳ್ಳಿ ಗ್ರಾಮದಲ್ಲಿ ಸಿಡಿಲಿಗೆ 25 ಕುರಿಗಳು ಸಾವನ್ನಪ್ಪಿವೆ. ಕುರಿಗಾಹಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

**ಕಲಬುರಗಿ ಜಿಲ್ಲೆ ಸೇಡಂ ತಾಲೂಕಿನ** ಕುರಕುಂಟಾ ಗ್ರಾಮದಲ್ಲಿ, ಮಳೆಗೆ ಮನೆ ಕುಸಿದು, ರಾಜೋಳಿ ಗ್ರಾಮದ ರಾಜೇಂದ್ರ ಬಸವಂತರಾವ ಮೃತಪಟ್ಟಿದ್ದಾರೆ.

<><><>

**ಭದ್ರಾ ಅಭಯಾರಣ್ಯದಲ್ಲಿದ್ದ,** 300ಕ್ಕೂ ಹೆಚ್ಚು ಜನ ವಸತಿ ಪ್ರದೇಶಗಳಿಗೆ, ಯಶಸ್ವಿಯಾಗಿ ಅಭಯಾರಣ್ಯದ ಹೊರಗೆ, ಪುನರ್ವಸತಿ ಕಲ್ಪಿಸಲಾದ, ರಾಜ್ಯದ ಏಕೈಕ ರಕ್ಷಿತಾರಣ್ಯ ಎಂದು, ಭದ್ರಾ ಹುಲಿ ಸಂರಕ್ಷಿತ ಪ್ರದೇಶದ, ಲಕ್ಕವಳ್ಳಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಂತೋಷ ಸಾಗರ ತಿಳಿಸಿದ್ದಾರೆ.

ಭದ್ರಾ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ, ಬೆಳ್ಳಿ ಹಬ್ಬದ ಅಂಗವಾಗಿ, ಚಿಕ್ಕಮಗಳೂರು ಅರಣ್ಯ ವಿಭಾಗ ಮತ್ತು ಕುವೆಂಪು ವಿಶ್ವವಿದ್ಯಾಲಯ ಪ್ರೊಫೆಸರ್ ಎಸ್.ಪಿ.ಹಿರೇಮಠ ಸಭಾಭವನದಲ್ಲಿ ಏರ್ಪಡಿಸಿದ್ದ ಉತ್ಸವದಲ್ಲಿ, ಅವರು ಮಾತನಾಡಿದರು.

ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊಫೆಸರ್ ಶರತ್ ಅನಂತಮೂರ್ತಿ ಅವರು, ಉತ್ಸವವನ್ನು ಉದ್ಘಾಟಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ** ಮೇಲ್ವಿಚಾರಣೆಗಾಗಿ, ಜಿಲ್ಲಾಧಿಕಾರಿ ನೇತೃತ್ವದ ಸಮಿತಿ ರಚನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯ** ಕಾಮಗಾರಿಗಳ ಅನು ್ಠಾನಕ್ಕೆ, ಸಚಿವ ಸಂಪುಟ ತಾತ್ವಿಕ ಒಪ್ಪಿಗೆ.
- **ಮಂಡ್ಯದ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ,** 30 ಕೋಟಿ ರೂಪಾಯಿ ಅನುದಾನ – ಸಚಿವ ಮಂಕಾಳ ವೈದ್ಯ.
- **ಪೌರ ಕಾರ್ಮಿಕ ದಿನಾಚರಣೆ:** 'ಪೌರ ಕಾರ್ಮಿಕರು ಸ್ವಚ್ಛತಾ ಸೇನಾನಿಗಳು' ಎಂದು, ಎಲ್ಲೆಡೆ ಶ್ಲಾಘನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>